## ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ

**ಸೆಷನ್ಸ್ ಕೇಸ್ ನಂಃ 15/2020** **ಅ.ಸಾ.1**

**ಚಾ.ಸಾ.1**

| | | |
|---|---|---|
| ಸಾಕ್ಷಿದಾರರ ಹೆಸರು | - | ರಂಜನ್ ಎಂ. |
| ತಂದೆಯ ಹೆಸರು | - | ಮುಂಡಪ್ಪ ಪೂಜಾರಿ |
| ವಯಸ್ಸು | - | 43 ವರ್ಷ |
| ಉದ್ಯೋಗ | - | ಬಾರ್ ಸಪ್ಲಯರ್ |
| ವಿಳಾಸ | - | ಲಕ್ಷ್ಮೀನಗರ, ಕೊಡವೂರು, ತೆಂಕನಿಡಿಯೂರು. |

ದಿನಾಂಕಃ 07-07-2023 ರಂದು ಸಾಕ್ಷಿಯನ್ನು ಕರೆಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

1. ನಾನು ಮಲ್ಪೆಯಲ್ಲಿ ಸೀವ್ಯೂ ಎಂಬ ಬಾರ್ ನಲ್ಲಿ ಸಪ್ಲಯರ್ ಕೆಲಸ ಮಾಡುತ್ತಿದ್ದೇನೆ. ನನ್ನ ಮನೆ ಕೊಡವೂರಿನ ಲಕ್ಷ್ಮೀನಗರದ ನಾಲ್ಕನೇ ಕ್ರಾಸ್ ನಲ್ಲಿದೆ. ಮೃತ ಯೋಗಿಶ್ ಪೂಜಾರಿ ನನ್ನ ಚಿಕ್ಕಮ್ಮನ ಮಗ. ಆತನ ತಾಯಿ ವಿನೋದ ಮೃತ ಪಟ್ಟಿರುತ್ತಾರೆ. ನನ್ನ ಹಾಗೂ ಮೃತ ಯೋಗಿಶ್ ನ ಮನೆ ಅಕ್ಕಪಕ್ಕದಲ್ಲಿವೆ. ಮೃತ ಯೋಗಿಶನ ಜೊತೆ ಇಬ್ಬರು ಮಾವಂದಿರಾದ ಚಾಸಾ4 ಮತ್ತು ಶ್ಯಾಮ ಪೂಜಾರಿ, ಮೃತನ ದೊಡ್ಡಮ್ಮ ಚಾಸಾ3 ಮತ್ತು ಮೃತನ ತಂಗಿ ಚಾಸಾ2 ರವರು ವಾಸ ಮಾಡುತ್ತಿದ್ದರು.

2. ಮೃತ ಯೋಗಿಶನ ಮಲ್ಪೆಯಲ್ಲಿ ಬೋಟ್ ನಲ್ಲಿ ಮೀನುಗಾರಿಕೆ ಕೆಲಸ ಮಾಡುತ್ತಿದ್ದನು. 2020 ನೇ ಇಸವಿಯಲ್ಲಿ ಕೋವಿಡ್-19 ಲಾಕ್ ಡೌನ್ ಇದ್ದುದರಿಂದ ನಾನು ಕೆಲಸಕ್ಕೆ ಹೋಗದೇ ಮನೆಯಲ್ಲಿಯೇ ಇದ್ದೆ. ದಿಃ 06-07-2020 ರಂದು ನಾನು ಮನೆಯಲ್ಲಿ ಊಟ ಮಾಡಿ ಟಿವಿ ನೋಡುತ್ತಿದ್ದೆ. ಆಗ ರಾತ್ರಿ 11-20 ಆಗಿತ್ತು. ಆ ಸಮಯ ಚಾಸಾ2 ಮತ್ತು 3 ರವರು ಹೊರಗಡೆ ಏನೋ ಶಬ್ದ ಕೇಳಿ ಮನೆಯಿಂದ ಹೊರಗೆ ಬಂದು ನನ್ನಲ್ಲಿ ತಿಳಿಸಿದ್ದು, ಅವರ ಮನೆಯ ಗೇಟ್ ನ ಹೊರಗಡೆ ಗಲಾಟೆಯಾಗುತ್ತಿದೆ ಎಂದು ತಿಳಿಸಿದರು. ನಂತರ ನಾನು, ಚಾಸಾ2 ಮತ್ತು 3 ರವರು

ಗೇಟಿನ ಹೊರಗೆ ಹೋದೆವು. ನೋಡುವಾಗ ಯೋಗಿಶನು ಸಿಮೆಂಟ್ ರಸ್ತೆಯ ಮೇಲೆ ಬಿದ್ದುಕೊಂಡಿದ್ದನು. ನೋಡುವಾಗ ಆತನ ಹೊಟ್ಟೆಗೆ, ಎದೆಗೆ ಮತ್ತು ಮೂರು ನಾಲ್ಕು ಕಡೆ ಚುಚ್ಚಿದ ಗಾಯಗಳಾಗಿ ರಕ್ತ ಚೆಲ್ಲಿತ್ತು. ಕೂಡಲೇ ಯೋಗಿಶ್ ಪೂಜಾರಿಯನ್ನು ನಾನು ಹಾಗೂ ಚಾಸಾ8 ರವರು ಅ್ಯಂಬ್ಯೂಲೆನ್ಸ್ ನಲ್ಲಿ ಮಣಿಪಾಲ ಆಸ್ಪತ್ರೆಗೆ ಕೊಂಡೊಯ್ದುರುತ್ತೇವೆ. ಪರೀಕ್ಷೆ ಮಾಡಿದ ವೈದರು ಆತ ಮೃತ ಹೊಂದಿದ್ದಾನೆ ಎಂದು ತಿಳಿಸಿದರು. ನಂತರ ವೈದ್ಯರು ಯೋಗಿಶನ ಶವವನ್ನು ಶವಾಗಾರದಲ್ಲಿ ಇರಿಸಿರುತ್ತಾರೆ. ನಂತರ ನಾನು ಬೆಳಗ್ಗಿನ ಜಾವ ಸುಮಾರು 2-30 ರಿಂದ 3-00 ಗಂಟೆಯ ಸಮಯದಲ್ಲಿ ಮಲ್ಪೆ ಪೋಲಿಸ್ ಠಾಣೆಗೆ ಹೋಗಿ ಒಂದು ದೂರನ್ನು ನೀಡಿರುತ್ತೇನೆ. ದೂರನ್ನು ನಿಪಿ1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ1(ಎ) ಎಂದು ಗುರುತಿಸಲಾಯಿತು.

3. ನಾನು ಯೋಗಿಶ್ ಪೂಜಾರಿಯನ್ನು ಪ್ರಥಮವಾಗಿ ಸ್ಥಳದಲ್ಲಿ ನೋಡುವಾಗ ಬೇರೆ ಯಾರು ಇರಲಿಲ್ಲ. ಯೋಗಿಶ್ ಪೂಜಾರಿಯನ್ನು ಯಾರು, ಯಾವ ಹತ್ಯಾರಿನಿಂದ ಮತ್ತು ಯಾವ ಕಾರಣಕ್ಕಾಗಿ ಹಲ್ಲೆ ಮಾಡಿದ್ದಾರೆ ಎಂದು ಗೊತ್ತಿಲ್ಲ. ಯೋಗಿಶ್ ಪೂಜಾರಿಗೆ ಯಾರು ಹಲ್ಲೆ ಮಾಡಿದ್ದಾರೆ ಎಂದು ನನ್ನ ದೂರಿನಲ್ಲಿ ಬರೆದಿಲ್ಲ. ಮರಣೋತ್ತರ ಪರೀಕ್ಷೆಯ ನಂತರ ಶವವನ್ನು ನಾನು ಹಾಗೂ ಮೃತನ ಸಂಬಂಧಿಕರು ಮನೆಗೆ ತಂದು ಅಂತ್ಯಕ್ರಿಯೆ ನಡೆಸಿರುತ್ತೇವೆ.

4.ದಿಃ 07-07-2020 ರಂದು ಪೋಲಿಸರು ಬೆಳಿಗ್ಗೆ 5-00 ಗಂಟೆ ಸುಮಾರಿಗೆ ಸ್ಥಳ ತನಿಖೆಗೆ ಬಂದಿದ್ದರು. ಮೃತ ಬಿದ್ದಿದ್ದ ಜಾಗವನ್ನು ನಾನು ಪೋಲಿಸರಿಗೆ ತೋರಿಸಿಕೊಟ್ಟಿರುತ್ತೇನೆ. ಪೋಲಿಸರು ಮಹಜರು ತಯಾರಿಸಿರುತ್ತಾರೆ. ಯೋಗಿಶ್ ಪೂಜಾರಿಯ ಬೈಕ್ ಆತ ಬಿದ್ದ ಸ್ಥಳದಿಂದ ಐದಾರು ಮೀಟರ್ ದೂರದಲ್ಲಿ ಬಿದ್ದಿತ್ತು. ಪೋಲಿಸರು ಹತ್ತಿ ಬಟ್ಟೆಯಿಂದ ಸ್ಥಳದಲ್ಲಿ ಬಿದ್ದಿದ್ದ ರಕ್ತವನ್ನು ಸಂಗ್ರಹಿಸಿ ಪ್ಲಾಸ್ಟಿಟಿಕ್ ಡಬ್ಬಿಯಲ್ಲಿ ಹಾಕಿ ಪ್ಯಾಕ್ ಮಾಡಿರುತ್ತಾರೆ ಹಾಗೂ ಸಾದಾ ಹತ್ತಿಯನ್ನು ಸಹಾ ಸಂಗ್ರಹಿಸಿ ಪ್ಯಾಕ್ ಮಾಡಿರುತ್ತಾರೆ. ಸ್ದ್ರಿ ಎರಡು ಸೊತ್ತುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸ್ಥಳದಲ್ಲಿ ತಯಾರಿಸಿದ ಮಹಜರನ್ನು ನಿಪಿ2 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ2(ಎ) ಎಂದು ಗುರುತಿಸಲಾಯಿತು.

5. ಮಹಜರು ಸಮಯದಲ್ಲಿ ಪೋಲಿಸರು ಎರಡು ಪೋಟೋಗಳನ್ನು ತೆಗೆದಿದ್ದು ಅದರಲ್ಲಿ ನನ್ನ ಭಾವ ಚಿತ್ರ ಇದೆ. ಅವುಗಳನ್ನು ನಿಪಿ3 ಮತ್ತು 4 ಎಂದು ಗುರುತಿಸಲಾಯಿತು. ಬೈಕ್ ಅನ್ನು ಪೋಲಿಸರು ಮನೆಯಲ್ಲೇ ಬಿಟ್ಟು ಹೋಗಿರುತ್ತಾರೆ. ಯೋಗಿಶನನ್ನು ಯಾರು, ಯಾವ ಕಾರಣಕ್ಕಾಗಿ ಮತ್ತು ಯಾವ ಹತ್ಯಾರಿನಿಂದ ಕೊಲೆ ಮಾಡಿದ್ದಾರೆ ಎಂದು ನಂತರವೂ ಸಹಾ ನನಗೆ ತಿಳಿದಿರುವುದಿಲ್ಲ. ನಿಪಿ1 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಪೋಲಿಸರು ಅಂದು ಅಮಾನತ್ತು ಪಡಿಸಿಕೊಂಡ ರಕ್ತ ಕಲೆಯಿರುವ ಹತ್ತಿ ಮತ್ತು ಮಾದರಿ ಹತ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಪ್ಯಾಕ್ ಮಾಡಲಾದ ಎರಡು ಪ್ಲಾಸ್ಟಿಕ್ ಡಬ್ಬಿಗಳನ್ನು ತೆಗೆದು ಸಾಕ್ಷಿಗೆ ತೋರಿಸಲಾಗಿ, ಹತ್ತಿ ಮುಖೇನ ತೆಗೆದ ರಕ್ತದ ಮಾದರಿಯನ್ನು ಮುದ್ದೆಮಾಲು-1 ಎಂದು ಗುರುತಿಸಲಾಯಿತು. ಮಾದರಿ ಹತ್ತಿಯನ್ನು ಮುದ್ದೆಮಾಲು-2 ಎಂದು ಗುರುತಿಸಲಾಯಿತು.

6. ಈ ಪ್ರಕರಣದ ಯಾವುದೇ ಆರೋಪಿಗಳ ಪರಿಚಯ ಇರುವುದಿಲ್ಲ. ನ್ಯಾಯಾಲಯದ ಮುಂದಿರುವ 3 ರಿಂದ 6 ನೇ ಆರೋಪಿತರು ಹಾಗೂ ವೀಡಿಯೋ ಕಾನ್ಸರೆನ್ಸ್ ಮೂಲಕ ತೋರಿಸಿದ 1 ಮತ್ತು 2 ನೇ ಆರೋಪಿತರ ಪರಿಚಯ ಇಲ್ಲ. ಒಂದನೇ ಆರೋಪಿ ಹಾಗೂ ಮೃತ ಯೋಗಿಶ್ ಪೂಜಾರಿಗೆ ಯಾವ ರೀತಿಯ ಸಂಬಂಧ ಇದೆ ಎಂದು ಗೊತ್ತಿಲ್ಲ. ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಮರು ಹೇಳಿಕೆಗಳನ್ನು ಪಡೆದುಕೊಂಡಿಲ್ಲ. ನನ್ನನ್ನು ವೃತ್ತ ನಿರೀಕ್ಷಕರ ಕಚೇರಿಗೆ ಕರೆಸಿ ಈ ಪ್ರಕರಣದ ಆರೋಪಿತರನ್ನು ತೋರಿಸಿರುವುದಿಲ್ಲ ಮತ್ತು ಮರು ಹೇಳಿಕೆಗಳನ್ನು ಪಡೆದುಕೊಂಡಿಲ್ಲ.

**( ಈ ಹಂತದಲ್ಲಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)**

**ಪಾಟಿ ಸವಾಲುಃ ಸರಕಾರಿ ಅಭಿಯೋಜಕರಿಂದಃ**

1. ಒಂದನೇ ಆರೋಪಿ ವಿನಯ್ ದೇವಾಡಿಗ ಮತ್ತು ಮೃತ ಯೋಗಿಶ್ ಪೂಜಾರಿ ಸ್ನೇಹಿತರಾಗಿರುವ ವಿಚಾರ ತಿಳಿದಿದೆ ಎಂದರೆ ಸರಿಯಲ್ಲ. ಈ ಪ್ರಕರಣದ 2 ರಿಂದ 6 ನೇ ಆರೋಪಿತರು ನಮ್ಮ ಪರಿಸರದಲ್ಲಿ ತಿರುಗಾಡುತ್ತಿರುವ ಸಮಯ ನಾನು ಅವರನ್ನು ನೋಡಿ ಪರಿಚಯ ಇರುತ್ತದೆ ಎಂದರೆ ಸರಿಯಲ್ಲ. ಒಂದನೇ ಆರೋಪಿಯು ಮೃತ ಯೋಗಿಶ್ ಪೂಜಾರಿಯ ಮನೆಗೆ ಆಗಾಗ ಬಂದು

ಹೋಗುತ್ತಿದ್ದುದನ್ನು ನಾನು ನೋಡಿದ್ದೇನೆ ಎಂದರೆ ಸರಿಯಲ್ಲ. ಲಾಕ್ ಡೌನ್ ಸಮಯದಲ್ಲಿ ಒಂದನೇ ಆರೋಪಿಯು ಶರಾಬು ಕುಡಿಯುವುದನ್ನು ನೋಡಿದ್ದನ್ನು ಮೃತನು ಎಲ್ಲರಿಗೂ ಹೇಳಿ ಪದೇ ಪದೇ ಅಪಹಾಸ್ಯ ಮಾಡುತ್ತಿದ್ದುದನ್ನು ಮೃತನು ಒಂದನೇ ಆರೋಪಿಯಲ್ಲಿ ಪ್ರಶ್ನಿಸಿದಾಗ ಅವರಿಬ್ಬರ ನಡುವೆ ಮಾತಿನ ಚಕಮಕಿಯಾಗಿ ತದನಂತರ ಅವರಿಬ್ಬರು ದ್ವೇಷಿಗಳಾಗಿದ್ದರು ಎಂದರೆ ಸರಿಯಲ್ಲ.

2. ದಿಃ 06-07-2020 ರಂದು ರಾತ್ರಿ 11-30 ರ ಸಮಯದಲ್ಲಿ ನಾನು ಟಿವಿ ನೋಡುತ್ತಿದ್ದಾಗ ಮನೆಯ ಹೊರಗೆ ಗಲಾಟೆ ಕೇಳಿ ನಾನು ಮನೆಯಿಂದ ಹೊರಗೆ ಬಂದು ನೋಡಿದಾಗ ಮೃತ ಯೋಗಿಶ್ ಪೂಜಾರಿಯೊಂದಿಗೆ ಅವರ ಮನೆಯ ಗೇಟಿನ ಬಳಿ 5 ಜನರು ಗಲಾಟೆ ಮಾಡುತ್ತಿದ್ದುನ್ನು ನಾನು ನೋಡಿದ್ದೇನೆ ಎಂದರೆ ಸರಿಯಲ್ಲ. ಸದ್ರಿ ಐವರು ಯೋಗಿಶನಿಗೆ ನಿನ್ನ ಹಾರಾಟ ಜಾಸ್ತಿಯಾಯಿತು ಇವತ್ತೇ ಕೊನೆ ಎಂದು ಹೇಳುತ್ತಾ ಯೋಗೀಶನನ್ನು ಹಿಡಿದುಕೊಂಡು ಅವರ ಕೈಗಳಲ್ಲಿದ್ದ ಆಯುಧಗಳಿಂದ ಯೋಗೀಶನನ್ನು ತಿವಿಯುತ್ತಿದ್ದುದನ್ನು ನಾನು ನೋಡಿದ್ದೇನೆ ಎಂದರೆ ಸರಿಯಲ್ಲ. ಆಗ ನಾನು ಬೊಬ್ಬೆ ಹೊಡೆದಾಗ ಸ್ಥಳದಲ್ಲಿದ್ದ ಸದ್ರಿ ಆರೋಪಿತರು ಜನ ಸೇರುವುದನ್ನು ನೋಡಿ ಅಲ್ಲೇ ಸ್ವಲ್ಪ ದೂರದಲ್ಲಿ ನಿಲ್ಲಿಸಿದ್ದ ವ್ಯಾಗನ್ ಆರ್ ಕಾರಿನಲ್ಲಿ ಹೊರಟು ಹೋಗಿರುವುದನ್ನು ನೋಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನೀಡಿದ ದೂರಿನಲ್ಲಿ ಈ ಪ್ರಕರಣದ 1 ರಿಂದ 5 ನೇ ಆರೋಪಿತರನ್ನು ಸ್ಥಳದಲ್ಲಿ ನೋಡಿರುವುದಾಗಿ ಹೇಳಿದ್ದು, ಆದರೆ ನಂತರ ನೆನಪಿಸಿಕೊಂಡಾಗ ಈ ಪ್ರಕರಣದ 6 ನೇ ಆರೋಪಿ ಸಹಾ ಕೃತ್ಯದಲ್ಲಿ ಭಾಗಿಯಾಗಿರುವ ಬಗ್ಗೆ ದಿಃ 07-07-2020 ರಂದು ಪೋಲಿಸರ ಮುಂದೆ ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ಆರೋಪಿಗಳೆಲ್ಲರೂ ಆ ದಿನ ರಾತ್ರಿ 11-30 ಗಂಟೆಗೆ ಯೋಗಿಶ್ ಪೂಜಾರಿಯ ಮನೆಯ ಬಳಿಯ ರಸ್ತೆಯಲ್ಲಿ ಒಟ್ಟು ಸೇರಿ 4 ನೇ ಆರೋಪಿಯು ಯೋಗಿಶನನ್ನುಓಡದಂತೆ ಹಿಡಿದುಕೊಂಡಿದ್ದು, 1, 3, 5 ಮತ್ತು 6 ನೇ ಆರೋಪಿತರು ಯೋಗಿಶ್ ಪೂಜಾರಿಗೆ ಕೈಗಳಿಂದ ಮನಸ್ಸೋ ಇಚ್ಚೆ ಹಲ್ಲೆ ನಡೆಸಿದ್ದು 2 ನೇ ಆರೋಪಿಯು ಚೂರಿಯಿಂದ ಯೋೀಗೀಶನ ಬೆನ್ನಿಗೆ, 2-3 ಬಾರಿ ತಿವಿದಿದ್ದು, ನಂತರ ಒಂದನೇ ಆರೋಪಿಯು ಅದೇ ಚೂರಿಯಿಂದ ಯೋಗೀಶನ ಹೊಟ್ಟೆಗೆ ತಿವಿದಿರುವುದನ್ನು ನಾನು ನೋಡಿರುತ್ತೇನೆ ಎಂದರೆ ಸರಿಯಲ್ಲ. ಈ ಬಗ್ಗೆ ದಿಃ 07-07-2020 ರಂದು ಈಗ ನನಗೆ ಓದಿ ಹೇಳಿದಂತೆ ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಮರು ಹೇಳಿಕೆಯನ್ನು ನಿಪಿ5 ಎಂದು ಗುರುತಿಸಲಾಯಿತು.

3. ದಿಃ 08-07-2020 ರಂದು ಉಡುಪಿ ವೃತ್ತ ನಿರೀಕ್ಷಕರು ನನ್ನನ್ನು ಅವರ ಕಚೇರಿಗೆ ಕರೆಸಿ ದಸ್ತಗಿರಿಯಾಗಿದ್ದ 1 ರಿಂದ 4 ನೇ ಆರುೀಪಿತರನ್ನು ತೋರಿಸಿದ್ದು ನಾನು ಅವರನ್ನು ತಕ್ಷೀರಿನಲ್ಲಿ ಭಾಗಿಯಾಗಿರುತ್ತಾರೆ ಎಂದು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಅದೇ ಸಮಯ ಆರೋಪಿತರು ಕೃತ್ಯಕ್ಕೆ ಬಳಸಿದ ವ್ಯಾಗನ್ ಆರ್ ಕಾರು ಕೆಎ-20-ಎನ್-6805 ಅನ್ನು ಸಹಾ ತೋರಿಸಿದ್ದು ಅದನ್ನು ಸಹಾ

ನಾನು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಈಬಗ್ಗೆ ಅದೇ ದಿನ ಈಗ ನನಗೆ ಓದಿ ಹೇಳಿದಂತೆ ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಮರು ಹೇಳಿಕೆಯನ್ನು ನಿಪಿ6 ಎಂದು ಗುರುತಿಸಲಾಯಿತು.

4. ದಿಃ 12-07-2020 ರಂದು ಉಡುಪಿ ವೃತ್ತ ನಿರೀಕ್ಷಕರು ನನ್ನನ್ನು ಅವರ ಕಚೇರಿಗೆ ಕರೆಸಿ ದಸ್ತಗಿರಿಯಾಗಿದ್ದ ಈ ಪ್ರಕರಣದ 5 ನೇ ಆರೋಪಿಯನ್ನು ತೋರಿಸಿದ್ದು ನಾನು ಅವನನ್ನು ತಕ್ಸೀರಿನಲ್ಲಿ ಭಾಗಿಯಾಗಿರುತ್ತಾರೆ ಎಂದು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಅದೇ ಸಮಯ ಆತನು ಕೃತ್ಯಕ್ಕೆ ಬಳಸಿದ ಸ್ಕೂಟರ್ ನಂಃ ಕೆಎ-20-ಇಬಿ-5237 ಅನ್ನು ಸಹಾ ತೋರಿಸಿದ್ದು ಅದನ್ನು ಸಹಾ ನಾನು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಬಗ್ಗೆ ಅದೇ ದಿನ ಈಗ ನನಗೆ ಓದಿ ಹೇಳಿದಂತೆ ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಮರು ಹೇಳಿಕೆಯನ್ನು ನಿಪಿ7 ಎಂದು ಗುರುತಿಸಲಾಯಿತು.

5. ದಿಃ 28-08-2020 ರಂದು ಉಡುಪಿ ವೃತ್ತ ನಿರೀಕ್ಷಕರು ನನ್ನನ್ನು ಅವರ ಕಚೇರಿಗೆ ಕರೆಸಿ ದಸ್ತಗಿರಿಯಾಗಿದ್ದ ಈ ಪ್ರಕರಣದ 6 ನೇ ಆರೋಪಿಯನ್ನು ತೋರಿಸಿದ್ದು ನಾನು ಅವನನ್ನು ತಕ್ಸೀರಿನಲ್ಲಿ ಭಾಗಿಯಾಗಿರುತ್ತಾರೆ ಎಂದು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಅದೇ ಸಮಯ ಆತನು ಕೃತ್ಯಕ್ಕೆ ಬಳಸಿದ ಮೋಟಾರ್ ಸೈಕಲ್ ನಂಃ ಕೆಎ-28-ಎಲ್-520 ಅನ್ನು ಸಹಾ ತೋರಿಸಿದ್ದು ಅದನ್ನು ಸಹಾ ನಾನು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಬಗ್ಗೆ ಅದೇ ದಿನ ಈಗ ನನಗೆ ಓದಿ ಹೇಳಿದಂತೆ ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಮರು ಹೇಳಿಕೆಯನ್ನು ನಿಪಿ8 ಎಂದು ಗುರುತಿಸಲಾಯಿತು. ಈ ಪ್ರಕರಣದ ಒಂದನೇ ಆರೋಪಿಗೆ ಮೃತ ಯೋಗೀಶನ ಮೇಲೆ ವೈಯಕ್ತಿಕ ದ್ವೇಷ ಇದ್ದ ಕಾರಣ ಆತನು 2 ರಿಂದ 6 ನೇ ಆರೋಪಿತೊಂದಿಗೆ ಯೋಗಿಶ್ ಪೂಜಾರಿಯನ್ನು ಕೊಲೆ ಮಾಡುವ ಸಂಚು ರೂಪಿಸಿ ಅದೇ ದಿನ ರಾತ್ರಿ 11-30 ಗಂಟೆಗೆ ಮಾರಕಾಯುಧಗಳಿಂದ ಹಲ್ಲೆ ಮಾಡಿ ಕೊಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿದ್ದರೂ ಸಹಾ ಮತ್ತು ಘಟನೆಯ ಬಗ್ಗೆ ಆರೋಪಿತರ ವಿರುದ್ಧ ದೂರನ್ನು ನೀಡಿದ್ದರೂ ಸಹಾ ಈಗ ಆರೋಪಿಗಳಿಗೆ ಹೆದರಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

**<u>ಆರೋಪಿತರ ಪರವಾಗಿ ಪಾಟೀ ಸವಾಲುಃ ಶ್ರೀ ಎಂ.ಎಸ್.ಎಸ್. ವಕೀಲರಿಂದ</u>**

ನಿಪಿ1 ದೂರನ್ನು ಯಾರು ಯಾರ ಹೇಳಿಕೆಯ ಮೇಲೆ ಬರೆದಿದ್ದಾರೆ ಎಂದು ಗೊತ್ತಿಲ್ಲ. ಮಹಜರಿಗೆ ಯಾರೆಲ್ಲಾ ಸಹಿ ಮಾಡಿದ್ದಾರೆ ಮತ್ತು ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಘಟನೆ ದಿನ ಜುಲೈ ತಿಂಗಳಿನಲ್ಲಿ ರಾತ್ರಿ ಜೋರಾಗಿ ಮಳೆ ಬರುತ್ತಿತ್ತು ಎಂದರೆ ಸರಿ.

**<u>ಮರು ವಿಚಾರಣೆ -</u>** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ದಿನೇಶ್ ಹೆಗ್ಡೆ)
ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.